# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 287 |
| ಮಾನ್ಯ ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | 16-07-2019 |

| | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಯು.ಜಿ.ಸಿ. ಹಾಗೂ ಎ.ಐ.ಸಿ.ಟಿ.ಇ. ವೇತನ ಪಡೆಯುತ್ತಿರುವ ಸರ್ಕಾರಿ/ಅನುದಾನಿತ ಪದವಿ ಕಾಲೇಜು, ವಿಶ್ವವಿದ್ಯಾನಿಲಯ ಹಾಗೂ ಇಂಜಿನೀಯರಿಂಗ್ ಹಾಗೂ ಪಾಲಿಟೆಕ್ನಿಕ್ ಕಾಲೇಜುಗಳ ಉಪನ್ಯಾಸಕರುಗಳಿಗೆ ಕೇಂದ್ರ ಸರ್ಕಾರದ 7ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿಗೊಳಿಸಲಾಗಿದೆಯೇ; | ರಾಜ್ಯದಲ್ಲಿ ಯು.ಜಿ.ಸಿ. ವೇತನ ಪಡೆಯುತ್ತಿರುವ ಸರ್ಕಾರಿ/ಅನುದಾನಿತ ಪದವಿ ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳ ಬೋಧಕರುಗಳಿಗೆ ಕೇಂದ್ರ ಸರ್ಕಾರದ 7ನೇ ಪರಿಷ್ಕೃತ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿಗೊಳಿಸಿ ದಿನಾಂಕ:16-03-2019 ರಂದು ಆದೇಶ ಹೊರಡಿಸಲಾಗಿದೆ.<br>ಪ್ರಸ್ತುತ, ಇಂಜನಿಯರಿಂಗ್ ಹಾಗೂ ಪಾಲಿಟೆಕ್ನಿಕ್ ಕಾಲೇಜುಗಳ ಬೋಧಕರಿಗೆ 7ನೇ ಎಐಸಿಟಿಇ ವೇತನಶ್ರೇಣಿಯನ್ನು ರಾಜ್ಯಸರ್ಕಾರವು ಜಾರಿಗೊಳಿಸಿರುವುದಿಲ್ಲ. ಕೇಂದ್ರ ಮಾನವ ಸಂಪನ್ಮೂಲ ಮಂತ್ರಾಲಯವು ದಿನಾಂಕ:18-01-2019ರ ಪತ್ರದಲ್ಲಿ ಹಾಗೂ ಎಐಸಿಟಿಇ, ನವದೆಹಲಿರವರ ದಿನಾಂಕ:01-03-2019ರ ಅಧಿಸೂಚನೆಯಲ್ಲಿನ ನಿರ್ದೇಶನದಂತೆ ರಾಜ್ಯದ ಎಲ್ಲಾ ಪದವಿ ಹಾಗೂ ಡಿಪ್ಲೊಮಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿನ ಅರ್ಹ ಬೋಧಕರುಗಳನ್ನು ಗುರುತಿಸಿ, 7ನೇ ಪರಿಷ್ಕೃತ ವೇತನ ಆಯೋಗದ ವಿಸ್ತರಣೆಯಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ವಾರ್ಷಿಕವಾಗಿ ತಗಲುವ ವೆಚ್ಚವನ್ನು ಲೆಕ್ಕಚಾರ ಹಾಕಲು ಹಾಗೂ ಈ ಸಂಬಂಧ ಎಐಸಿಟಿಇ ಹೊರಡಿಸಿರುವ ಪರಿನಿಯಮಗಳನ್ನು ಪರಾಮರ್ಶಿಸಿ ಪ್ರಸ್ತಾವನೆ/ವರದಿಯನ್ನು ಸಲ್ಲಿಸಲು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ, ವರದಿ ಪಡೆಯಲಾಗಿದ್ದು, ವರದಿಯು ಸರ್ಕಾರದಲ್ಲಿ ಪರಿಶೀಲನಾ ಹಂತದಲ್ಲಿದೆ. |
| (ಆ) | ರಾಜ್ಯದಲ್ಲಿ 7ನೇ ವೇತನ ಆಯೋಗದ ಶಿಫಾರಸ್ಸಿನಂತೆ ದಿನಾಂಕ: 1.1.2016ರಿಂದ ವೇತನ ಬಾಕಿಯನ್ನು ನೀಡಲಾಗಿದೆಯೇ; | ರಾಜ್ಯದಲ್ಲಿ ಯು.ಜಿ.ಸಿ. ವೇತನ ಪಡೆಯುತ್ತಿರುವ ಸರ್ಕಾರಿ/ಅನುದಾನಿತ ಪದವಿ ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳ ಉಪನ್ಯಾಸಕರುಗಳಿಗೆ ಕೇಂದ್ರ ಸರ್ಕಾರದ 7ನೇ ಪರಿಷ್ಕೃತ ವೇತನ ಬಾಕಿಯನ್ನು ನೀಡುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರದ ಪಾಲಿನ ಮೊತ್ತವು ಸ್ವೀಕೃತಿಯಾದ ನಂತರ ಬಾಕಿಯನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತದೆ. |
| (ಇ) | ಈ ಸಂಬಂಧ ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು) | MHRD ದಿನಾಂಕ:02-11-2017ರ ಪತ್ರದಲ್ಲಿ ಕೇಂದ್ರ ಸರ್ಕಾರದ 7ನೇ ವೇತನ ಆಯೋಗದ ವರದಿ ಶಿಫಾರಸ್ಸು ಮಾಡಿದ್ದು, ಸದರಿ ವೇತನಶ್ರೇಣಿಯು ದಿನಾಂಕ: 01-01-2016 ರಿಂದ ಜಾರಿಗೆ ಬಂದಿದ್ದು, ರಾಜ್ಯದಲ್ಲಿ ಯು.ಜಿ.ಸಿ. ವೇತನ ಪಡೆಯುತ್ತಿರುವ ಸರ್ಕಾರಿ/ಅನುದಾನಿತ ಪದವಿ ಕಾಲೇಜು ಹಾಗೂ ವಿಶ್ವವಿದ್ಯಾಲಯ ಬೋಧಕರುಗಳಿಗೆ ಕೇಂದ್ರ ಸರ್ಕಾರದ 7ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಸರ್ಕಾರದ ಆದೇಶ ಸಂಖ್ಯೆ:ಇಡಿ 483 ಯುಎನ್ಇ 2017 ದಿನಾಂಕ:16-03-2019 ರಲ್ಲಿ ಜಾರಿಗೊಳಿಸಲಾಗಿದೆ.<br>ದಿನಾಂಕ:01-01-2016 ರಿಂದ 31-03-2019 ರವರೆಗಿನ ಅವಧಿಯ ಬೇಬಾಕಿ ಮೊತ್ತವನ್ನು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರವು ಶೇ.50:50 ರಂತೆ ಬಿಡುಗಡೆ ಮಾಡಬೇಕಾಗಿರುತ್ತದೆ. ಈ ಸಂಬಂಧ MHRD ನಿಗಧಿಪಡಿಸಿರುವ ನಮೂನೆಯಲ್ಲಿ ಕೇಂದ್ರ ಸರ್ಕಾರದ ಪಾಲಿನ ಮೊತ್ತವನ್ನು ಪಡೆಯಲು ಸೂಕ್ತ ಪ್ರಸ್ತಾವನೆಯನ್ನು ಈಗಾಗಲೇ ಸಲ್ಲಿಸಲಾಗಿರುತ್ತದೆ. ಕೇಂದ್ರ ಸರ್ಕಾರದ ಪಾಲು ಬಿಡುಗಡೆಯಾದ ನಂತರ ರಾಜ್ಯ ಸರ್ಕಾರವು ತನ್ನ ಪಾಲನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತದೆ. |

**ಸಂಖ್ಯೆ: ಇಡಿ 91 ಯುಎನ್ಇ 2019**

(ಜಿ.ಟಿ. ದೇವೇಗೌಡ)

ಉನ್ನತ ಶಿಕ್ಷಣ ಸಚಿವರು.